ಕಥೆ

# ಆಪರೇಷನ್ ಸಕ್ಸಸ್



ನಡೆಯಲೂ ಕಷ್ಟಪಡುತ್ತಿದ್ದ ವೃದ್ಧ ತಂದೆಯನ್ನು ಮಗ ಕಾರಿನಿಂದ ಕೆಳಗೆ ಇಳಿಸುತ್ತಿದ್ದಾನೆ.

'ವ್ಹೀಲ್ ಚೇರ್ ಬೇಕಾ ಸಾರ್?' ಎಂದು ಗೇಟ್‌ಕೀಪರ್ ಕೇಳಿದ.

'ಬೇಡಪ್ಪ. ವಾಕರ್ ಇದೆ, ನಡೀತಾರೆ' ಅಂದ ಮಗ.

ಮುಂದೆ ಕಲ್ಲು ಬೆಂಚಿನ ಮೇಲೆ ಕುಳಿತಿದ್ದ ಮೂವರು ಮುದುಕರು ಕಾರಿನ ಕಡೆ ನೋಡಿದರು.

'ಹೊಸ ಕೇಸು ಕಣ್ರೋ, ಆಪರೇಷನ್ ಸ್ಟಾರ್ಟ್. ನಡೀರಿ' ಅಂತ ರಿಸೆಪ್ಷನ್ ಹತ್ರ ಬಂದು ಪೇಪರ್ ಓದುತ್ತಾ ಕುಳಿತರು.

ತಂದೆಯನ್ನು ಕರೆದುಕೊಂಡು ಬಂದ ಮಗನಿಗೆ ರಿಸೆಪ್ಷನಿಸ್ಟ್, 'ಹೇಳಿ ಸರ್, ಏನಾಗಬೇಕು?' ಅಂತ ಕೇಳಿದಳು.

'ಅಡ್ಮಿಷನ್ ಮೇಡಂ, ಇಲ್ಲಿನ ಚಾರ್ಜಸ್ ಹೆಚ್ಚಿಲ್ಲ ತಾನೆ?'

'ಇಲ್ಲಾ ಸಾರ್, ಎರಡು ರೀತಿ ರೂಮ್ಸ್ ಇದೆ, ಎಸಿ ಮತ್ತು ನಾನ್ ಎಸಿ.'

'ಎಸಿ ಥಂಡಿ ಆಗುತ್ತೆ... ಫ್ಯಾನ್ ಸಾಕು, ಅನ್ಸುತ್ತೆ. ಅಲ್ವಾ ಅಪ್ಪಾ?'

'ಹೌದು' ಅಪ್ಪ ತಲೆ ಅಲ್ಲಾಡಿಸಿದ.

ಹೀಗೆ ಒಂದರ ಹಿಂದೆ ಒಂದು ಚೌಕಾಸಿ ಪ್ರಾರಂಭವಾಯಿತು. 'ಯಾವುದು ಕಡಿಮೆಯೋ ಅದೇ ಕೊಡಿ' ಎಂದು ಮಗ ಹೇಳುತ್ತಿದ್ದ. ಇದನ್ನೆಲ್ಲಾ ನಿಂತೇ ಕೇಳುತ್ತಿದ್ದ ತಂದೆ ಸೂರಿನ ಕಡೆ ಮುಖ ಮಾಡಿ ಅದೇನೋ ಗೊಣಗುತ್ತಿದ್ದರು. 'ಸುಮ್ನಿರಿ, ಪಿರಿಪಿರಿ ಮಾಡ್ಬೇಡಿ, ಡಿಸ್ಟರ್ಬ್ ಆಗ್ತಾ ಇದೆ' ಎಂದು ಮಗ ಗದರಿದ. ಅಪ್ಪ ಸುಮ್ಮನಾದ.

ಅಷ್ಟರಲ್ಲಿ ರಿಸೆಪ್ಷನಿಸ್ಟ್, 'ನಿಮ್ಮ ತಂದೆಯ ಹೆಸರು?' ಎಂದಳು.

'ರಾಮ್ ರಾವ್'

ಮಗ ಹೇಳಿದ್ದನ್ನು ರಿಸೆಪ್ಷನಿಸ್ಟ್ ಟೈಪ್ ಮಾಡುತ್ತಿದ್ದಾಳೆ.

'ವಯಸ್ಸು, ನಿಮ್ಮ ಹೆಸರು, ವಿಳಾಸ ತಿಳಿಸಿ ಸಾರ್. ಐಡಿ ಕಾರ್ಡ್ ಕೊಡಿ ಇಬ್ಬರದ್ದೂ.'

ಮಗ ವಿವರ ಕೊಡಲು ಪ್ರಾರಂಭಿಸಿದ. ಇನ್ನೇನು ದಾಖಲಾತಿ ಮುಗಿದು ಅವನು ಹಣದ ಚೆಕ್‌ಗೆ ಸೈನ್ ಹಾಕಬೇಕು. ಅಷ್ಟರಲ್ಲಿ ಪೇಪರ್ ಓದುತ್ತಿದ್ದ ಆ ಮೂವರೂ ಮುದುಕರು ಎದ್ದು ಬಂದು, ಆಗ ತಾನೇ ನೋಡಿದವರ ಹಾಗೆ ಒಬ್ಬ ಕೇಳಿದ 'ಏನ್ರೀ ರಾಮ ರಾವ್ ಆರಾಮಾ?'

'ಆಶ್ರಮದ ಕಡೆ ಇಷ್ಟು ದಿನ ಆದ್ಮೇಲೆ ಕಾಣಿಸ್ಕೊತಾ ಇದ್ದೀರಾ. ಡೊನೇಷನ್ ಕೊಡೋಕ್ಕೆ ಬಂದ್ರಾ ಅಥವಾ ಇನ್ಯಾವುದಾದ್ರೂ ಮಗೂನ ಇವ್ರಿಗೆ ದತ್ತು ಕೊಡ್ಸೋಕಾ?' ಇನ್ನೊಬ್ಬ ಕೇಳಿದ.

'ಏನ್ರಿ ರಾಮ್ ರಾಯ್ರೆ, ಮೂವತ್ತೆರಡು ವರ್ಷದ ಹಿಂದೆ ಇದೇ ಆಶ್ರಮದಲ್ಲಿ ನೀವು ದತ್ತು ತಕ್ಕೊಂಡ ಹುಡುಗ ಈಗ ಬೆಳೆದು ದೊಡ್ಡೋನಾಗಿರಬೇಕಲ್ಲಾ?' ಎನ್ನುತ್ತಾ ಮತ್ತೊಬ್ಬ ಕಣ್ಣು ಹೊಡೆದ.

ಮಗನ ಕಿವಿ ಚುರುಕಾಯಿತು, ಏನು ಇವರು ದತ್ತು ತೆಗೆದುಕೊಂಡಿದ್ರಾ?

'ಹೂಂ, ಮದುವೆ ಆಗಿ ಬಹಳ ದಿನ ಆದ್ರೂ ಮಕ್ಕಳಾಗಿರಲಿಲ್ಲ. ಅದಕ್ಕೆ ಇಲ್ಲಿ ಇದ್ದುದರಲ್ಲಿ ರೋಗಿಷ್ಟ ಅನಾಥ ಮಗುವನ್ನು ದತ್ತು ತೆಗೆದುಕೊಂಡ್ರು. ಆವತ್ತು ಅವರು ಮನಸ್ಸು ಮಾಡದಿದ್ದರೆ ಆ ಮಗು ಉಳೀತಾ ಇರಲಿಲ್ಲ' ಎಂದು ಡಾಕ್ಟರ್ ರೀತಿ ಕಾಣುತ್ತಿದ್ದ ಮುದುಕ ಹೇಳಿದರು.

'ಯಾಕೆ?' ಮಗ ಕೇಳಿದ.

'ಅಯ್ಯೋ, ಅವತ್ತು ಇವ್ರು ಕರ್ಕೊಂಡು ಬಂದ ಮಗೂಗೆ ಟಿ.ಬಿ. ಆಗಿ, ನ್ಯುಮೋನಿಯಾ ಕೂಡಾ ಆಗಿತ್ತು.'

'ಉಳಿಯೊಲ್ಲ ಅಂತ ಎಷ್ಟು ಹೇಳಿದ್ರೂ ಕೇಳಲಿಲ್ಲ. ಎಷ್ಟೇ ಖರ್ಚಾದ್ರೂ ಪರವಾಗಿಲ್ಲ, ನೀವು ಟ್ರೀಟ್‌ಮೆಂಟ್ ಮಾಡಿ, ನಾ ಹಣದ ವ್ಯವಸ್ಥೆ ಮಾಡ್ತಿನಿ' ಅಂತ ದುಂಬಾಲು ಬಿದ್ದು, ಇರೋ ನಾಲ್ಕು ಎಕರೆ ತರಿ ಭೂಮೀನ ಮಾರಿ ಆ ದುಡ್ಡಿಂದ ಮಗೂನ ಹುಷಾರ್ ಮಾಡ್ಕೊಂಡೇ ಹೋಗಿದ್ರು. ಸ್ವಲ್ಪ ಇರಪ್ಪಾ, ಗದ್ದದ ಮೇಲಿರೋ ಮಚ್ಚೆ ನೋಡಿದ್ರೆ ಆ ಮಗು ನೀನೇ ಇರಬೇಕು ಅನ್ಸುತ್ತೆ. ಅಲ್ವಾ ರಾಮ್ ರಾಯ್ರೆ?'

'ಛೇ, ಅನಾಥನಾಗಿದ್ದ ನನಗೆ ತಂದೆಯಾದವನನ್ನೇ ಅನಾಥನನ್ನಾಗಿ ಮಾಡೋಕೆ ಹೊರಟೆನಲ್ಲ. ನಾನೆಂಥಾ ಪಾಪಿ' ಎಂದುಕೊಂಡವನೇ, 'ನನ್ನ ಕ್ಷಮಿಸಿ ಅಪ್ಪ, ನಾನೆಂಥಾ ಅಪರಾಧ ಮಾಡೋಕೆ ಹೊರಟಿದ್ದೆ' ಅಂತ ಅಪ್ಪನ ಕಾಲಿಗೆ ಬಿದ್ದ.

ರಾಮ ರಾವ್‌ಗೆ ಅಲ್ಲಿ ಏನು ನಡೆಯುತ್ತಿದೆ ಎಂದು ಗೊಂದಲ. ಮಗ ಅವರನ್ನು ಬಿಗಿದಪ್ಪಿದ್ದಾನೆ. ಅವನ ಬೆನ್ನ ಹಿಂದೆ ಮುದುಕರು ನೀವು ಗೆದ್ದಿರಿ ಅಂತ ಸನ್ನೆ ಮಾಡುತ್ತಿದ್ದಾರೆ. ಮಗ ತಂದೆಯನ್ನು ಮರಳಿ ಮನೆಗೆ ಕರೆದುಕೊಂಡು ಹೊರಟ.

ಇತ್ತ ಮುದುಕರು, 'ಆಪರೇಷನ್ ಸಕ್ಸಸ್. ಮತ್ತೊಂದು ಗೆಲುವು ನಮ್ಮದಾಯ್ತು. ನಮ್ಮ ಪಾಡು ಬೇರೆ ಯಾರಿಗೂ ಬರಬಾರದು. ನಾಟಕಾನೋ, ಸುಳ್ಳೋ... ಅಪ್ಪ ಮಗ ಒಂದಾಗಿರ್ತಾರಲ್ಲ ಅಷ್ಟೇ ಸಾಕು' ಅಂತ ಮಾತನಾಡಿಕೊಳ್ಳುತ್ತಿದ್ದರು.

ಕಾರು ಹತ್ತುತ್ತಿದ್ದ ರಾಮ ರಾವ್ ಆ ಮೂವರನ್ನೂ ನೋಡಿ ಕೈ ಮುಗಿದ ರೀತಿಯಲ್ಲಿದ್ದ ಧನ್ಯತಾ ಭಾವ, ಮುಖದಲ್ಲಿ ಮನೆಗೆ ಮರಳುತ್ತಿದ್ದೇನೆ ಎಂಬ ಸಂತಸ ಈ ಮೂವರಿಗೂ ಆತ್ಮತೃಪ್ತಿ ತಂದಿತ್ತು. ■